# ಶಾಜಹಾನ್ ಗುಲ್ಲು





ಶಾಜಹಾನ್ ಪದಮ್‌ಸೀ ಸದ್ಯಕ್ಕೆ ಬಾಲಿವುಡ್ ಗಾಸಿಪ್ ಕಾಲಂನ ಹಾಟ್ ಹೆಸರು. 'ರಾಕೆಟ್ ಸಿಂಗ್' ಎಂಬ ಸಿನಿಮಾದಲ್ಲಿ ರಣಬೀರ್ ಕಪೂರ್ ಜತೆಗೆ ನಟಿಸಿ ಮೊದಲ ಬಾರಿಗೆ ಬಾಲಿವುಡ್ ಪ್ರವೇಶಿಸಿದ ಶಾಜಹಾನ್, ಈ ಚಿತ್ರದಿಂದ ದೊಡ್ಡ ಹೆಸರೇನೂ ಮಾಡಲಿಲ್ಲ. ಚಿತ್ರದ ಪೂರ್ತಿ ಯಶಸ್ಸು ರಣಬೀರ್ ಪಾಲಿಗೇ ಹೋಯಿತು. ಇತ್ತೀಚೆಗೆ ಅಜಯ್ ದೇವಗನ್ ಜತೆಗೆ 'ದಿಲ್ ತೊ ಬಚಾ ಹೈ ಜಿ' ಎಂಬ ಚಿತ್ರದಲ್ಲಿ ನಟಿಸಿದರೂ ಆ ಚಿತ್ರ ಬೋರ್ಡಿಗೇ ಬರಲಿಲ್ಲ. ಚಿತ್ರಜೀವನದಲ್ಲಿ ಪ್ಲಾಪ್ ಆಗುವತ್ತ ನಡೆದಿರುವ ಈ ಸುಂದರಿ ಇದೀಗ ಸುದ್ದಿಯಾಗಿರುವುದು ಕ್ರಿಕೆಟಿಗ ಶ್ರೀಶಾಂತ್ ಜತೆಗಿನ ಸುತ್ತಾಟದಿಂದ.

ಶ್ರೀಶಾಂತ್ ಮತ್ತು ಶಾಜಹಾನ್‌ಗೆ ಮಧ್ಯರಾತ್ರಿ ಕಾರಲ್ಲಿ ಕುಳಿತು ಮುಂಬೈ ರಸ್ತೆಗಳನ್ನು ಸುತ್ತುವ ಖಯಾಲಿಯಂತೆ. ರಾತ್ರಿ ಶ್ರೀಶಾಂತ್ ಜತೆ ಲಾಂಗ್‌ಡ್ರೈವ್ ಹೋಗುವುದೆಂದರೆ ಶಾಜಹಾನ್‌ಗೂ ಪಂಚಪ್ರಾಣವಂತೆ! ಕೈಯಲ್ಲಿ ಸಿನಿಮಾಗಳಿಲ್ಲದಿದ್ದರೆ ಪಾಪ ಆಕೆಯಾದರೂ ಏನು ಮಾಡುತ್ತಾಳೆ? ಪತ್ರಕರ್ತರು ಈ ಬಗ್ಗೆ ಪ್ರಶ್ನಿಸಿದಾಗ ಮಾತ್ರ ಹುಷಾರಾದ ಶಾಜಹಾನ್, 'ನಾವಿಬ್ಬರೂ ಒಳ್ಳೆಯ ಸ್ನೇಹಿತರು' ಎಂದಿದ್ದಾಳೆ.

ಈ ಹಿಂದೆ ಶ್ರೀಶಾಂತ್ ಜತೆ ಹೀಗೆಯೇ ಸುತ್ತಾಡುತ್ತಿದ್ದ ರಿಯಾ ಸೇನ್ ಕೂಡಾ ಆರು ತಿಂಗಳ ಬಳಿಕ 'ನಾವಿಬ್ಬರೂ ಜಸ್ಟ್ ಫ್ರೆಂಡ್ಸ್. ನಮ್ಮ ನಡುವೆ ಪತ್ರಕರ್ತರು ಬರೆಯುವಂತೆ ಯಾವ ಸಂಬಂಧವೂ ಇಲ್ಲ' ಎಂದಿದ್ದಳು! ಈಗ ಶಾಜಹಾನ್ ಸರದಿ. ವಿಶ್ವಕಪ್ ಕ್ರಿಕೆಟ್ ಪಂದ್ಯಗಳಲ್ಲಿ ಶ್ರೀಶಾಂತ್ ಬೌಲಿಂಗಿಗೆ ಎದುರಾಳಿ ಬ್ಯಾಟ್ಸ್‌ಮನ್ ಹಿಗ್ಗಾಮುಗ್ಗಾ ಚಚ್ಚುವುದನ್ನು ನೋಡಿದ ಅಭಿಮಾನಿಗಳು, ಶ್ರೀಗೆ ಬಾಲಿವುಡ್ಡೇ ಗತಿಯಾಗಬಹುದು ಎಂದುಕೊಂಡರೆ ಅದು ಇಬ್ಬರ ತಪ್ಪೂ ಅಲ್ಲ!



# ಐಶ್ವರ್ಯ ಸೋನಂ ರಾಜಿ

ಕೋಳಿಜಗಳ ನಡೆಸುತ್ತಿದ್ದ ಐಶ್ ಬೇಬಿ ಮತ್ತು ಸೋನಂ ಕಪೂರ್ ನಡುವೆ ರಾಜಿ ಆಗಿದೆಯಂತೆ. ಇಬ್ಬರ ಮಧ್ಯೆ ರಾಜಿ ಮಾಡಿಸುವಷ್ಟರಲ್ಲಿ ಅಭಿಷೇಕ್ ಬಚ್ಚನ್ ಸುಸ್ತಾದನಂತೆ. ಇಬ್ಬರನ್ನೂ ದೂರದ ನ್ಯೂಜಿಲೆಂಡ್‌ನಲ್ಲಿ ಕೂಡಿಸಿ ಕೊಂಡ ಅಭಿ, ರಾಜಿಯ ಬಳಿಕ ನಿರಾಳವಾಗಿ 'ಪ್ಲೇಯರ್ಸ್; ಚಿತ್ರದಲ್ಲಿ ನಟಿಸುತ್ತಿದ್ದಾನಂತೆ. ಈ ಚಿತ್ರದಲ್ಲಿ ಸೋನಂಳೇ ಅಭಿಗೆ ನಾಯಕಿ.

ಈ ಮಧ್ಯೆ ಕ್ಯಾನೆ ಚಿತ್ರೋತ್ಸವಕ್ಕೆ ಸೋನಂ ಮತ್ತು ಐಶ್ವರ್ಯ ಇಬ್ಬರನ್ನೂ ಕರೆಯಲಾಗಿದೆ. ರೆಡ್ ಕಾರ್ಪೆಟ್ ಗೌರವದಲ್ಲಿ ಈ ಇಬ್ಬರು ಭಾರತೀಯ ನಟಿಯರ ಜತೆಗೆ ಫ್ರೀಡಾ ಪಿಂಟೋ ಕೂಡಾ ಸೇರಿ ಕೊಳ್ಳಲಿದ್ದಾಳಂತೆ. ಐಶ್ ಬೇಬಿ ಅಂತರರಾಷ್ಟ್ರೀಯ ಚಿತ್ರೋತ್ಸವದ ಹಳೇ ಹುಲಿ. ಆಕೆಯ ಜತೆಗೆ ಜಗಳ ಮಾಡಿಕೊಂಡರೆ ಲಾಸ್ ಎನ್ನುವುದು ಸೋನಂಗೆ ತಡವಾಗಿ ಅರ್ಥವಾಗಿದೆಯಂತೆ. ಕಳೆದ ವರ್ಷದ ಚಿತ್ರೋತ್ಸವದಲ್ಲಿ ಐಶ್‌ಗಳನ್ನು ಸೋನಂ 'ಆಂಟಿ' ಎಂದು ಕರೆದದ್ದೇ ಇಬ್ಬರ ನಡುವೆ ಸಂಬಂಧ ಬಿಗಡಾಯಿಸಲು ಮುಖ್ಯ ಕಾರಣವಂತೆ.

ಈ ಮಧ್ಯೆ ಬೆಂಗಳೂರಿನಲ್ಲಿ ನಡೆದ ಗ್ರಾನೈಟ್ ಪ್ರದರ್ಶನದಲ್ಲಿ ಐಶ್ವರ್ಯ ರೈಯ ಆಳೆತ್ತರದ ಗ್ರಾನೈಟ್ ಶಿಲ್ಪವೊಂದು ಎಲ್ಲರ ಗಮನ ಸೆಳೆದಿದೆ. ಜೈಪುರದಲ್ಲಿ ಪೂರ್ಣ ಗ್ರಾನೈಟ್‌ನಿಂದ ತಯಾರಾದ ಈ ಶಿಲ್ಪ ರಚಿಸಲು 11 ಲಕ್ಷ ರೂಪಾಯಿ ಖರ್ಚಾಗಿದೆಯಂತೆ!

■ ಬಿಂದು